**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>**

**<u>ಎಸ್.ಸಿ ಸಂಖ್ಯೆ 199/2025</u>**

| | | |
|---|---|---|
| ಸಾಕ್ಷಿದಾರರ ಹೆಸರು | : ರಾಜು ಟಿ.ಎನ್ | **ಪಿಡಬ್ಲ್ಯೂ: 9** |
| **ತಂದೆಯ** / ಗಂಡನ ಹೆಸರು | : ನಂಜಪ್ಪ | ಸಿಡಬ್ಲ್ಯೂ: 12 |
| ವಯಸ್ಸು | : 43 ವರ್ಷ | |
| ಉದ್ಯೋಗ | : ಆಟೋ ಚಾಲಕ | |
| ವಾಸಸ್ಥಳ | : ಬೆಂಗಳೂರು | |

**<u>ಸಾಕ್ಷಿಯನ್ನು ಈ ದಿನ ದಿಃ 26.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

1. ನಾನು 14 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಇರುತ್ತೇನೆ. ಸಾಕ್ಷಿಯು ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದಿ.15.12.2022 ರ ಅಮಾನತ್ತು ಮಹಜರ್ ಆಗಿದ್ದು, ಅದನ್ನು ಈಗಾಗಲೇ **ನಿಪಿ**–10 ಎಂದು ಮೂಲ ಪ್ರಕರಣದಲ್ಲಿ ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು **ನಿಪಿ**–10(**ಬಿ**) ಮೂಲ ಪ್ರಕರಣದಲ್ಲಿ ಗುರುತಿಸಲಾಗಿರುತ್ತದೆ.

2. ದಿ.15.12.2022 ರಂದು ನನ್ನ ಆಟೋ ಕಳುವು ಆದ ಕಾರಣಕ್ಕೆ ಮಂಡಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನನ್ನ ಆಟೋ ಕಳುವು ಆದ ವಿಚಾರಕ್ಕೆ ಪೊಲೀಸರು ನನಗೆ ಫೋನ್ ಕರೆ ಮಾಡಿದ್ದು, ಆಗ ನಾನು ನನ್ನ ಬಳಿ ಇದ್ದ ಆಟೋಗೆ ಸಂಬಂಧಿಸಿದ ದಾಖಲೆಗಳನ್ನು ತೆಗೆದುಕೊಂಡು ಮಂಡಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನನ್ನ ಜೊತೆ

ನನ್ನ ಬಾಮೈದ ವಿಶ್ವ ಇದ್ದರು. ನಾವು ಠಾಣೆಯಲ್ಲಿ ಇದ್ದಾಗ ಒಬ್ಬ ಆಸಾಮಿ ಇದ್ದು ಆತ ಬಟ್ಟೆಯನ್ನು ಬದಲಾಯಿಸುತ್ತಿದ್ದನು. ಪೊಲೀಸರು ನನ್ನ ವಾಹನದ ಕೀ ನೀಡುತ್ತೇನೆ ಎಂದು ಹೇಳಿದ್ದು, ಆಗ ಸಾಕ್ಷಿಯಾಗಿ ಒಂದು ಸಹಿ ಹಾಕು ಎಂದು ದಾಖಲೆಗೆ ಸಹಿ ಪಡೆದಿರುತ್ತಾರೆ ಮತ್ತು ಬಟ್ಟೆ ಬದಲಾಯಿಸುತ್ತಿದ್ದ ವ್ಯಕ್ತಿಯ ಜೊತೆಗೆ ಪೋಟೋವನ್ನು ತೆಗೆದಿರುತ್ತಾರೆ. ಪೊಲೀಸರು ಆಸಾಮಿಯಿಂದ ಪಡೆದುಕೊಂಡ ಬಟ್ಟೆಗಳನ್ನು ತಮ್ಮ ಬಳಿ ಸಾಕ್ಷಿಗಾಗಿ ಇಟ್ಟುಕೊಂಡರು. ಪೊಲೀಸರು ಸದರಿ ಬಟ್ಟೆಗೆ ರಕ್ತದ ಕಲೆಯಾಗಿದೆ ಎಂದು ಹೇಳಿದರು. ಒಂದು ಟ್ರ್ಯಾಕ ಪ್ಯಾಂಟ್ ಮತ್ತು ಟೀ ಶರ್ಟ ಅನ್ನು ಪಡೆದುಕೊಂಡಿದ್ದರು. ಸಾಕ್ಷಿಯು ಮುದ್ದೆ ಮಾಲು –5 ಮತ್ತು 6 ಗಳನ್ನು ಮೂಲ ಪ್ರಕರಣದಲ್ಲಿ ಗುರುತಿಸಲಾಗಿರುತ್ತದೆ.. ಸಾಕ್ಷಿ ನಿಪಿ–11 ರಲ್ಲಿರುವ ಪೋಟೋವನ್ನು ನೋಡಿ ಗುರುತಿಸಿರುತ್ತಾರೆ.

3. ನಿಶಾನೆ ಪಿ–11 ರಲ್ಲಿ ಕಾಣುವ ಆರೋಪಿ ನ್ಯಾಯಾಲಯದಲ್ಲಿ ಇರುತ್ತಾನೆ ಎಂದರೆ ಸಾಕ್ಷಿಯು 3 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 3 ನೇ ಆರೋಪಿತರ ಪರ ವಕೀಲರಿಂದಃ–**

4. ನಾನು ಪೋಟೋವನ್ನು ನೋಡಿ ವ್ಯಕ್ತಿಯನ್ನು ಗುರುತಿಸಿದ್ದು, ಆತನನ್ನು ಮುಂಚೆ ನೋಡಿದ ಬಗ್ಗೆ ಗುರುತಿಸಿರುವುದಿಲ್ಲ ಎಂದರೆ ಸರಿ. ಸದರಿ ನಿಶಾನೆ ಪಿ–11 ರಲ್ಲಿರುವ ಪೋಟೋವನ್ನು ಈ ದಿನವೇ ನೋಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ– ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು.)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**